ಶ್ರೀ ಜಿ. ನಾರಾಯಣಗೌಡರು.—ಈ ಒಡೆದು ಹೋಗಿರತಕ್ಕ ಕೆರೆಗಳ ಪೈಕಿ ಯಾವುದನ್ನಾದರೂ ಜೀರ್ಣೋದ್ಧಾರ ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಷ್ಟೋ ಕೆರೆಗಳನ್ನು ಜೀರ್ಣೋದ್ಧಾರ ಮಾಡಲಾಗುತ್ತಿದೆ. ಎಷ್ಟು ಜೀರ್ಣೋದ್ಧಾರವಾಗಿದೆಯೆಂಬುದನ್ನು ಕೆಲಸ ಪೂರೈಸಿದನಂತರ ಹೇಳುತ್ತೇನೆ.

ಶ್ರೀ ಜಿ. ನಾರಾಯಣಗೌಡರು.—ಕೋಲಾರ ಜಿಲ್ಲೆಯಲ್ಲ ದೊಡ್ಡದೊಡ್ಡ ನೀರಾವರಿ ಯೋಜನೆಗಳಿಗೆ ಅವ ಕಾಶವಿಲ್ಲದಿರುವುದರಿಂದ, ಒಡಕು ಕೆರೆಗಳನ್ನು ಬೇಗ ದುರಸ್ತಿ ಮಾಡುವುದು ಒಳ್ಳೆಯದಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲಾಖೆಯ ವರ ದೃಷ್ಟಿಯಲ್ಲಿ ಕೂಡ ಅದೇರೀತಿ ಅಂಥಾ ಕೆರೆಗಳ ಜೀರ್ಣೋದ್ಧಾರ ಮಾಡತಕ್ಕದ್ದು ಸೂಕ್ತ ಮತ್ತು ಲಾಭದಾಯಕ ಎಂದು ತಿಳಿದುಬಂದರೆ, ಅವುಗಳನ್ನು ಮಾಡೇಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—ಈ ಒಡೆದುಹೋದ ಕೆರೆಗಳ ಪೈಕಿ ಕಳೆದ 5 ವರ್ಷಗಳಿಂದ ಎಷ್ಟೆಷ್ಟು ಕೆರೆಗಳನ್ನು ದುರಸ್ತಿ ಮಾಡಲಾಗಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕ ಕೆರೆಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ. ಪಿ. ಡಬ್ಲು. ಇಲಾಖೆಯವರ ದೃಷ್ಟಿಯಲ್ಲಿ ಯಾವುದು ಸೂಕ್ತವಾದು ದೆಂದು ಪರಿಗಣಿಸಲಾಗುತ್ತದೋ ಅಂಥವುಗಳನ್ನೆಲ್ಲಾ ಜೀರ್ಣೋದ್ಧಾರ ಮಾಡುತ್ತಲೇ ಇದ್ದಾರೆ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಈಗ ಈ ಒಡಕು ಕೆರೆಗಳ ಮತ್ತು ಉಪಯೋಗಕ್ಕೆ ಬಾರದ ಕೆಲವು ಕೆರೆಗಳ ಅಂಗಳಗಳನ್ನು ವ್ಯವಸಾಯಕ್ಕಾಗಿ ಕೊಡುತ್ತಿದ್ದೀರಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಕೊಡಲಾಗಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗೆ ಎಲ್ಲೆಲ್ಲಿ ಕೊಡಲಾಗಿದೆಯೆಂಬುದನ್ನು ತಿಳಿಸಲಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಯಾವ ರೀತಿ ತೀರ್ಮಾನಕ್ಕೆ ಬಂದು, ಹಾಗೆ ಜಮೀನು ಕೊಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅನೇಕ ವಿಚಾರಗಳನ್ನು ಪರ್ಯಾಲೋಚನೆ ಮಾಡಿ, ತೀರ್ಮಾನ ಮಾಡತಕ್ಕ ವಿಚಾರವಾಗಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ಜಮೀನು ಕೊಡತಕ್ಕ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ನೀತಿ ಇದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಯಾಯ ಸಂದರ್ಭಗಳ ಮೇಲೆ ಇದು ಹೋಗತಕ್ಕದ್ದಾಗಿದೆ.

Sri H. C. LINGA REDDY (Kolar District—General).—Have the people of these villages represented that the respective tanks should be restored very early ?

The Hon'ble Sri H. SIDDAIYA.—Some of these villagers.

Sri H. C. LINGA REDDY—Are the Government collecting wet assessment under these tanks ?

The Hon'ble Sri H. SIDDAIYA.—I want notice.

Mr. SPEAKER.—Next question. Sri M. Muniswamy.

Delay in introducing Prohibition in the wet districts of the State.

*Q—79. **Sri M. MUNISWAMY** (Kolar District—Depressed Class).—

Will the Government be pleased to state :—

(*a*) the reasons for delay in introducing Prohibition in the wet districts of the State ;

(*b*) the amount of loss that would be incurred by them by the introduction of Prohibition in those areas ?

A.—**The Hon'ble Sri H. SIDDAIYA** (Minister for Revenue and Excise).—

(*a*) The results of the working of the Prohibition Scheme in the Districts in which it has been introduced are being studied.

(*b*) About Rs. 2,10,35,000.

Sri M. MUNISWAMY.—Will the introduction of prohibition in other districts take a long time ?

***The Hon'ble Sri H. SIDDAIYA.**—It is under consideration.

Sri M MUNISWAMY.—Will it take at least a few months ?

The Hon'ble Sri H. SIDDAIYA.—I could not give the exact time.

Sri M. MUNISWAMY—Does this not lead to all these irregularities ?

The Hon'ble Sri H. SIDDAIYA.—I cannot say 'yes'.

Sri Kadidal MANJAPPA (Shimoga District General).—Is Prohibition still in the experimental stage ?

The Hon'ble Sri H. SIDDAIYA.—It is there for the last two years and odd.

Sri Kadidal MANJAPPA.—I want to know whether it is still in the experimental stage.

The Hon'ble Sri H. SIDDAIYA.—We are reaching almost the close of it.

Sri Kadidal MANJAPPA.—May I know how long this experiment will be carried out ?

The Hon'ble Sri H. SIDDAIYA.—For a short time more.

Sri Kadidal MANJAPPA.—May I know the conclusions arrived at by the Government on the working of the prohibition so far?

The Hon'ble Sri H. SIDDAIYA.—I cannot say exactly what the result of it is. It requires a little more time to come to a decision about it.

ಶ್ರೀ ಪಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ). —ಧ್ಯೇಯದಲ್ಲಿ ಬದಲಾವಣೆಯಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. —ಏನೂ ಇಲ್ಲ.

ಶ್ರೀ ಪಿ. ಎಸ್. ನಾರಾಯಣರಾಯರು. —ನಷ್ಟವಾದರೂ ಕೂಡ ಮುಂದುವರಿಸಬೇಕೆಂಬುದು ಸರ್ಕಾರದ ಧ್ಯೇಯವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. —ಹೊನ್ನೆಯೇ ಅದಕ್ಕೆ ಸ್ಪಷ್ಟವಾಗಿ ಉತ್ತರ ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—(a) ಪ್ರಶ್ನೆಗೆ ಉತ್ತರವಾಗಿ "The results.....are being studied." ಎಂದು ಹೇಳಿದೆ. ಪಾನನಿರೋಧ ಜಾರಿಯಲ್ಲಿರುವ ಪ್ರದೇಶದಲ್ಲಿ ಕಳ್ಳಬಟ್ಟಿ ಇಳಿಸುವುದರಿಂದ ಜನರ ಆರೋಗ್ಯದ ಮೇಲೆ ಏನು ಪರಿಣಾಮವಾಗಿದೆಯೆಂಬುದನ್ನು ತಿಳಿಯಲು ಸರ್ಕಾರದವರು ಏನಾದರೂ ಏರ್ಪಾಡು ಮಾಡಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ. ಜನರಲ್ ಆಗಿ ಗೊತ್ತಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಪಾನನಿರೋಧ ಜಾರಿಗೆ ಬಂದ ಮೇಲೆ ಜನರ ಆರೋಗ್ಯದ ಮೇಲೆ ಏನು ಪರಿಣಾಮವಾಗಿದೆಯೆಂಬುದನ್ನು ಮೆಡಿಕಲ್ ಅಭಿಪ್ರಾಯವನ್ನು ಪಡೆದು ಪರೀಕ್ಷೆ ಮಾಡಿದ್ದೀರಾ ?

The Hon'ble Sri H. SIDDAIYA.—So far, medical opinion is not sought for.

ಶ್ರೀ ಎಚ್. ಸಿದ್ದವೀರಪ್ಪನವರು.—ಈಗಲಾದರೂ ವೈದ್ಯರ ಸಲಹೆಯನ್ನು ತರಿಸಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮ್ಮ ಸಲಹೆಯು ಜ್ಞಾಪಕದಲ್ಲಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಪಾನನಿರೋಧ ಜಾರಿಗೆ ಬಂದಿರುವಕಡೆ ವ್ಯವಸಾಯದ ಕೆಲಸ ಮಾಡುವ ಕೂಲಿಗಾರರ ಮೇಲೆ adverse effect ಉಂಟುಮಾಡಿದೆ ಎಂಬುದನ್ನು ಗಣನೆ ಮಾಡಿದ್ದೀರಾ ?

Mr. SPEAKER.—That does not arise.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಪಾನನಿರೋಧ ಮಾಡಿರುವ ಕಡೆ ಗಾಂಜ, ಅಫೀಮುಗಳನ್ನೂ ನಿಲ್ಲಿಸಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿಲ್ಲಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಪಾನನಿರೋಧದಿಂದ ನಷ್ಟವಾಗುವ ಪರವಾನದಲ್ಲಿ ಗಾಂಜ ಮತ್ತು ಅಫೀಮಿನ ಪರವಾನವೂ ಸೇರಿದೆಯೆ ?

The Hon'ble Sri H. SIDDAIYA.—It includes that also.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—Wet ಡಿಸ್ಟ್ರಿಕ್ಟ್‌ಗಳಲ್ಲ ಪಾನನಿರೋಧ ಜಾರಿಗೆ ತರಲು ಎಷ್ಟುಕಾಲ ಬೇಕು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಸ್ವಲ್ಪ ದಿವಸ ಬೇಕು ಎಂದು ಉತ್ತರ ಹೇಳಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—Results study ಮಾಡುತ್ತೇವೆಂದು ಉತ್ತರ ಕೊಟ್ಟಿದೆ. ಹಾಗಾದರೆ ತೀರ್ಮಾನಕ್ಕೆ ಬರಲು ಎಷ್ಟು ದಿವಸಬೇಕು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿರ್ದಿಷ್ಟವಾಗಿ ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಪಾನನಿರೋಧವು ಜಾರಿಯಲ್ಲಿರುವ ಕಡೆ results study ಮಾಡುತ್ತೇವೆಂದು ಹೇಳಿದ್ದೀರಿ. ಯಾವ ಅಂಕಿ ಅಂಶಗಳನ್ನು ತಾವು study ಮಾಡುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳ್ಳಬಟ್ಟಿ ಇಳಿಸುತ್ತಾರೆಯೇ, ಹಾಗಿದ್ದರೆ, ಜನರಿಗೆ ಅದರಿಂದಾಗುವ ಪರಿಣಾಮ, ಪಾನನಿರೋಧದಿಂದ ಆಗುವ ಪ್ರಯೋಜನ ಇತ್ಯಾದಿ ವಿಚಾರಗಳನ್ನು ಪರಿಶೀಲಿಸಬೇಕು. ಅದಕ್ಕೆ ಅವಕಾಶಬೇಕು.

Sri D. H. CHANDRASEKHARAIYA (Chitaldrug District—General).—Is it the opinion of the Government to go back upon the prohibition scheme?

The Hon'ble Sri H. SIDDAIYA.—It is still being studied; that is the answer.

Sri D. H. CHANDRASEKHARAIYA.—True; with what purpose it is being studied?

The Hon'ble Sri H. SIDDAIYA.—It is with that very object.

Sri D. H. CHANDRASEKHARAIYA.—With what object?

The Hon'ble Sri H. SIDDAIYA.—Whether it is desirable to extend it or not is being studied.

Sri D. H. CHANDRASEKHARAIYA.—May we take it that the Government have not committed themselves to the policy of complete prohibition in the State?

The Hon'ble Sri H. SIDDAIYA.—If it is on the whole bad to the society, whatever may be the commitment, that may be re-opened for consideration. Thereby I do not mean we will go back.

ಶ್ರೀ ಬಿ. ಹುಚ್ಚೇಗೌಡರು.—ಈ ಪಾನನಿರೋಧದಿಂದ ಈಗ ಯಾವ ರೀತಿಯ ಪರಿಣಾಮವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದಕ್ಕೆ ಸ್ವಲ್ಪ ಕಾಲಬೇಕು.

ಶ್ರೀ ಬಿ. ಹುಚ್ಚೇಗೌಡರು.—ಪಾನನಿರೋಧ ಹೋಗಬೇಕೆಂದು ಯಾರಾದರೂ ಅರಿಕೆ ಮಾಡಿಕೊಂಡಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. —ಅಲ್ಲಲ್ಲೇ ಕೆಲವರು ಹೇಳುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಖಚಿತವಾಗಿ ಯಾರೂ ಹೇಳಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಖಚಿತವಾಗಿ ಮುಂದುವರಿಸಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಪಾನನಿರೋಧ ಜಾರಿಗೆ ಬಂದ ಮೇಲೆ ಅದನ್ನ ಮುಂದುವರಿಸುವುದರಿಂದ 2

ಕೋಟಿ 10 ಲಕ್ಷ 35 ಸಾವಿರ ರೂಪಾಯಿ ನಷ್ಟವಾಗುವುದೆಂದು ಹೇಳಿದೆ. ಹಾಗಾದರೆ ಇದು ಜಾರಿಗೆ ಬರುವುದಕ್ಕೆ ಮುಂಚೆ ಎಷ್ಟು ವರಮಾನವಿತ್ತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೆಚ್ಚು ಕಡಮೆ ಅಷ್ಟೇ ಇತ್ತು.

ಶ್ರೀ ಬಿ. ಹುಚ್ಚೇಗೌಡರು.—ಪಾನನಿರೋಧ ಜಾರಿಗೆ ಬಂದ ಮೇಲೆ ಉತ್ಪತ್ತಿ ಹೊದಲದ್ದುದಕ್ಕಿಂತ ಹೆಚ್ಚಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹತ್ತು ಲಕ್ಷ ಹೆಚ್ಚುಕಡಮೆ ಅಷ್ಟೇ ಇತ್ತು.

ಶ್ರೀ ಬಿ. ಹುಚ್ಚೇಗೌಡರು.—1947-48ರಲ್ಲಿ ಒಂದು ಕೋಟಿ ಚಿಲ್ಲರೆ ಕಡಮೆಯಿದ್ದು ಈಗ 40 ಲಕ್ಷ ಜಾಸ್ತಿಯಾಗಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ತಮಗೇ ಅರ್ಥವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಇದನ್ನು ಮುಂದುವರಿಸಿದರೆ ಈ ಬಾಬಿನ ವರಮಾನ ಕಡಮೆಯಾಗಬಹುದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಸನ ಜಿಲ್ಲೆಯೊಂದರಲ್ಲೇ 37½ ಲಕ್ಷ ವರಮಾನವಿದೆಯೆಂಬುದು ತಮಗೆ ಗೊತ್ತೇ ಇದೆ.

ಶ್ರೀ ಬಿ. ಹುಚ್ಚೇಗೌಡರು.—5 ಜಿಲ್ಲೆಗಳಲ್ಲಿ ಕಡಮೆ ಮಾಡಿದರೂ ಹೆಚ್ಚು ಆದಾಯ ಬರುತ್ತಿರುವುದರಿಂದ 6 ನೆಯ ಜಿಲ್ಲೆಯಲ್ಲಿ ನಿರೋಧ ಮಾಡಿದರೂ ಹೆಚ್ಚು ವರಮಾನ ಬರುತ್ತದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ತರಹ ಲೆಕ್ಕ ಹಾಕುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಅದಕ್ಕೆ ಕಾರಣವಿರಬೇಕು ತಾನೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಒಂದೇ ಕಾರಣವಲ್ಲ. ಅನೇಕ ಕಾರಣಗಳಿವೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಪಾನನಿರೋಧವನ್ನು ಇತರ ಕಡೆಗಳಲ್ಲೂ ಜಾರಿಗೆ ತರಬೇಕೆಂಬ ಅಭಿಪ್ರಾಯವು ಪ್ರಶ್ನೋತ್ತರಗಳ ಕಾಲದಲ್ಲಿ ಹೊರಬೀಳಲಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಭಿಪ್ರಾಯ ತಮಗೇ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಪಾನನಿರೋಧವನ್ನು ಮುಂದುವರಿಸದಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಮೂರು ದಿವಸಗಳ ಹಿಂದೆ ಮೊನ್ನೆರಾತ್ರಿ ನಾನು ಮಾಡಿದ ಭಾಷಣದಲ್ಲಿ ಅದಕ್ಕೆ ಮೂರು ಕಾರಣಗಳಿವೆಯೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಉಳಿದ ಜಿಲ್ಲೆಗಳಲ್ಲಿ ಒಂದೇಸಲ ಪಾನನಿರೋಧವನ್ನು ಜಾರಿಗೆ ತರುತ್ತೀರೋ ಅಥವಾ ಬೇರೆ ಏನಾದರೂ ಕ್ರಮವನ್ನು ಅನುಸರಿಸುತ್ತೀರೋ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಜಿಲ್ಲೆಯಲ್ಲಿ ಗಲಾಟೆ ಹೆಚ್ಚಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಆದ್ದರಿಂದ ಮುಂದೆ ಇದನ್ನು ಮುಂದುವರಿಸಿದಾಗ ಮೈಸೂರು ಜಿಲ್ಲೆಯಲ್ಲೂ ಜಾರಿಗೆ ತರುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾಲ್ಕು ಜಿಲ್ಲೆಗಳಿವೆ. ಯಾವ ಜಿಲ್ಲೆಯಲ್ಲಿ ಮುಂದುವರಿಸಬೇಕೆಂಬುದು ತೀರ್ಮಾನವಾಗಬೇಕು.

ಶ್ರೀ ಬಿ. ಎಸ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಪಾನನಿರೋಧವು ಜಾರಿಗೆ ಬರುವುದಕ್ಕೆ ಮುಂಚೆ ಗಾಂಜ, ಅರಾಕ್ ಮತ್ತು ಬ್ರಾಂದಿ ಮುಂತಾದುವನ್ನು ಮಾರುತ್ತಿದ್ದರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ವಲ್ಪ ಮಟ್ಟಿಗೆ ಅಲ್ಲಲ್ಲಿ ಮಾರುತ್ತಿದ್ದರು.

ಶ್ರೀ ಬಿ. ಎಸ್. ಬೋರಣ್ಣಗೌಡರು.—ಸ್ವಲ್ಪ ಮಟ್ಟಿಗೆ ಎಂದರೆ ಏಷ್ಟು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕರಾರುವಾಕ್ಕಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ ಎಸ್. ಬೋರಣ್ಣಗೌಡರು.—ಈಗ ಕಳ್ಳಬಟ್ಟಿ ಇಳಿಸುವುದರಿಂದ ಜನರ ಆರೋಗ್ಯ ಕೆಟ್ಟಿದೆಯೆಂದು ಹೇಳಿದರು. ಅದಕ್ಕೆ ಅವಕಾಶವಿಲ್ಲದಂತೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅಭಿಪ್ರಾಯದ ಮಾತು.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಬೊಂಬಾಯಿ ಮತ್ತು ಮದ್ರಾಸು ಪ್ರಾಂತಗಳಲ್ಲಿ ಪಾನನಿರೋಧವು ಪೂರ್ಣವಾಗಿ ಆಗಿದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರ .—ಆಗಿದೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಮದ್ರಾಸಿನವರು ತಮ್ಮ ನೀತಿಯನ್ನು ಬದಲಾಯಿಸುವುದಿಲ್ಲವೆಂದು ಹೇಳಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೇಳಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಆದ್ದರಿಂದ ಮೈಸೂರಿನಲ್ಲಿ ಪೂರ್ಣವಾಗಿ ಜಾರಿಗೆ ತರಬೇಕೆಂದು ಯೋಚನೆ ಮಾಡುತ್ತಿದ್ದಾರೆಂದು ಹೇಳಬಹುದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತಿದ್ದೇವೆ.

Sri T. SUBRAMANYA.—So, Government have not committed themselves to the policy of complete prohibition?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಮಿಟ್ ಮಾಡಿಕೊಂಡಿಲ್ಲವೆಂದು ಹೇಳುವುದಿಲ್ಲ. ಸ್ವಲ್ಪ ನಿಧಾನವಾಗಿ ಹೋಗಬೇಕೆಂಬ ಅಭಿಪ್ರಾಯವಿದೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಕಳ್ಳಬಟ್ಟಿ ಇಳಿಸುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ನಿಧಾನ ಮಾಡಿದ್ದೀರೋ ಅಥವಾ ಅದಕ್ಕೆ ಬೇರೆ ಕಾರಣವೇನಾದರೂ ಇದೆಯೊ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳ್ಳಬಟ್ಟಿ ಇಳಿಸುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಅಭಿಪ್ರಾಯಪಡುವುದಿಲ್ಲ; ಅದನ್ನು ಅವಷ್ಟು ನಿಲ್ಲಿಸಿ ಮುಂದುವರೆಯುವುದು ಒಳ್ಳೆಯದು ಎಂದು ಅನೇಕರ ಅಭಿಪ್ರಾಯವಿದೆ.

Sri T. SUBRAMANYA.—It is not very clear to me, Mr. Speaker. ಕಳ್ಳಬಟ್ಟಿ ಇಳಿಸುವುದು ಸರ್ಕಾರದ ಒಂದು ದಕ್ಷತೆಯ ಅಭಾವದಿಂದ ಜಾಸ್ತಿಯಾಗುತ್ತಾ ಇದೆ ಎಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ; ಕಡಿಮೆಯಾಗಿದೆ ಎಂಬುದನ್ನು ಅಂಕಿ ಸಂಖ್ಯೆಯಿಂದ ಸ್ಪಷ್ಟಪಡಿಸಿದ್ದೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು.—ಆಗಾಗ್ಯೆ ಪಾನ ನಿರೋಧವನ್ನು ಸ್ವಲ್ಪ ಸ್ವಲ್ಪ ಹೆಚ್ಚಾಗಿ ಮುಂದುವರಿಸಿ ಕೊಂಡು ಹೋಗುವುದು ಉತ್ತಮವಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಹೌದು.

ಶ್ರೀ ಟಿ. ಸುಬ್ರಹ್ಮಣ್ಯರವರು.–ಆದ್ದರಿಂದ ಈ ವರ್ಷ ಪುನಃ ಪರಿಶೀಲನೆ ಮಾಡಿ ಒಂದು ಡಿಸ್ಟ್ರಿಕ್ಟ್‌ಗೆ ಜಾರಿ ಮಾಡಲು ಆಲೋಚಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನ್ಯಾಲ್ಯಾರು ದಿನದಲ್ಲಿ ಅದು ಇತ್ಯರ್ಥವಾಗಬೇಕಾಗಿದೆ.

Sri V. S. NARAYANA RAO (Bangalore City-General).–Does the extension of Prohibition depend on the report of this Committee?

ಅಧ್ಯಕ್ಷರು.—ಸಮಿತಿಯವರು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎ. ಎಸ್. ನಾರಾಯಣರಾಯರು.—ಅವರು ಆಲೋಚಿಸುತ್ತಿದ್ದಾರೆ ಎಂದು ಹೇಳಿದರು. ಎಂದರೆ ಅವರ ವರದಿಯಮೇಲೆ ತಮ್ಮ ನೀತಿ ಅನ್ವಯವಾಗುತ್ತದೆಯೇ ಎಂದು ನನ್ನ ಪ್ರಶ್ನೆ.

Mr. SPEAKER.—Government will study this.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ ನಿಮ್ನಪಂಗಡ).—Wet ಡಿಸ್ಟ್ರಿಕ್ಟ್‌ಗಳಿಗೆ ಪಾನ ನಿರೋಧವನ್ನು ಜಾರಿ ಮಾಡಬೇಕೆಂದು ಈ ಸಭೆಯಲ್ಲಿ ಕೇಳಲಾಗಿತ್ತೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಎರಡು ದಿನ ದಿಂದ ಚೆರ್ಚೆಯಾಗಿರತಕ್ಕದ್ದು ಎಲ್ಲರ ಗಮನಕ್ಕೆ ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಲೋಚನೆ ಯಿಲ್ಲದೆ ಎಂದು ತಿಳಿಸಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಪಾನನಿರೋಧ ವನ್ನು ಜಾರಿ ಮಾಡಿರುವ ಜಿಲ್ಲೆಗಳಲ್ಲ ಕುಡಿಯತಕ್ಕ ಜನ ಗಳ ಆರ್ಥಿಕ ಪರಿಸ್ಥಿತಿ ಎಷ್ಟೋ ಮಟ್ಟಿಗೆ ಉತ್ತಮ ವಾಗಿದೆ ಎಂದು ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.–ಒಪ್ಪಿಕೊಳ್ಳಲೇ ಬೇಕು. ಬಹಳ ಜನಗಳ ಪರಿಸ್ಥಿತಿ ಉತ್ತಮ ಗೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ಈ ವಿಷಯದಲ್ಲಿ ಸರ್ವೇ ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ವೇ ಮಾಡಬೇಕಾಗಿಲ್ಲ; ನಾನಾ ಮೂಲಕ ತಿಳಿದುಕೊಳ್ಳುವು ದಕ್ಕೆ ಅವಕಾಶವಿದೆ.

ಶ್ರೀ ಟಿ. ಹನುಮಯ್ಯನವರು.—ಆದ್ದರಿಂದ ಇತರ ಜಿಲ್ಲೆಗಳಲ್ಲೂ ಜಾರಿ ಮಾಡಿದರೆ ಕುಡಿಯತಕ್ಕ ಜನಗಳು ಉತ್ತಮ ಸ್ಥಿತಿಗೆ ಬರುತ್ತಾರೆ ಎಂಬುದು ಸರ್ಕಾರದವ ರಿಗೆ ಗೊತ್ತಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಯಿಲ್ಲದೆ ಎಂದು ತಿಳಿಸಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಜಾಗ್ರತೆ ಇತರ ಜಿಲ್ಲೆಗಳಲ್ಲೂ ಜಾರಿ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಭರವಸೆ ನೀಡುತ್ತಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಲೋಚನೆ ಯಿಲ್ಲದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು—ರಿಟ್ರಾಸೀಡೆಡ್ ಪ್ರದೇಶ).—ಕಳ್ಳ ಬಟ್ಟಿ ಇಳಿಸುವುದು ಕಮ್ಮಿ ಆಗಿದೆ ಅಥವಾ ಹೆಚ್ಚಾಗಿದೆ ಎಂಬ ಬಗ್ಗೆ ಒಂದು ಸಮಿತಿಯನ್ನು ಏರ್ಪಾಡು ಮಾಡಿ ಅವರಿಂದ ಒಂದು ವರದಿಯನ್ನು ತೆಗೆದುಕೊಂಡರೆ, ಇದು ಹೇಗೆ ನಡೆಯು ತ್ತಿದೆ ಎಂಬುದನ್ನು ತಿಳಿಸುತ್ತಾರೆ ಅಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪೋಲೀಸ್ ನವರ ವಿಶೇಷ ಶಿಬ್ಬಂದಿ ಮಂಜೂರು ಮಾಡಿದ್ದೇವೆ. 1-4-50 ರಿಂದ ಅವರು ಕೆಲಸ ಮಾಡುತ್ತಾ ಇದ್ದಾರೆ. ಈಗ 11 ತಿಂಗಳು ಕೆಲಸ ನಡೆದಿರುವುದರಿಂದ ನಾವು ಯಾವ ರೀತಿ ಇದೆ ಎಂಬುದನ್ನು ಹೇಳಬಹುದು.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಸಮಿತಿ ನಿರ್ಧರಿ ಸುವುದರಿಂದ ಸರಿಯಾದ ವರದಿ ಬರುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಮಿತಿ ನೇಮಕ ಮಾಡುವುದಕ್ಕೆ ಆಕ್ಷೇಪಣೆ ಅವಶ್ಯಕತೆ ಈಗಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಪ್ರತಿ ತಾಲ್ಲೂಕಿನಲ್ಲೂ ಪಾನನಿರೋಧ ಸಮಿತಿ ಎಂಬುದಾಗಿ ಮಾಡಿರುವುದು ನಿಜವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಂಕಿ ವರದಿ ಯನ್ನು ಆಗಾಗ್ಯೆ ತರಿಸಿಕೊಂಡು ಅದರಿಂದ ಅಂಕಿ ಅಂಶ ಗಳನ್ನು ನಿರ್ಧರಿಸಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.–ಅದು ಡೆಪ್ಯುಟಿ ಕಮಿಷನರ ಮೂಲಕ ಎಕ್ಸೈಜು ಕಮಿಷನರವರಿಗೆ ಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪ್ರೋಹಿಬಿಷನ್ ಸಮಿತಿಯವರು ವರದಿಕಳುಹಿಸುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸು ತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.— ಆ ಸಮಿತಿಯ ವರ ವರದಿಯಲ್ಲಿ ಅಡಕವಾಗಿರುವ ಅಂಶಗಳನ್ನು ಎಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರಬೇಕೆನ್ನುವುದು ಆಲೋಚ ನೆಯಲ್ಲಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೆಲ್ಲಾ ಆಲೋಚನೆಯಲ್ಲಿದೆ ಎಂದು ಹೇಳಿದ್ದೇನೆ.

Co-operative Societies, their functioning and development

*Q.—93. **Sri K. PUTTASWAMY** (Mandya District—General).– Will the Government be pleased to state :—

(a) The types of co-operative societies that were in existence prior to 1948;

(b) The types of co-operative societies that are being started and are functioning since 1948;

(c) The nature of development envisaged?